# ಹೊಸಹೊಸ ಚಿಂತನೆಗಳು

ಲೈಂಗಿಕಶಕ್ತಿಯನ್ನು ನಿರಂತರವಾಗಿ ಉಳಿಸಿಕೊಳ್ಳುವ ಪ್ರಯತ್ನಗಳು ಎಲ್ಲಾ ದೇಶಕಾಲಗಳಲ್ಲಿಯೂ ನಡೆಯುತ್ತಲೇ ಬಂದಿವೆ. ಆದರೆ ಇವೆಲ್ಲವೂ ಸಹಜ ಕಾರಣಗಳಿಗೆ ಪುರುಷ ಕೇಂದ್ರಿತವಾಗಿತ್ತು. ಲೈಂಗಿಕಶಕ್ತಿಯನ್ನು ವೃದ್ಧಿಸುವುದು, ಆಸಕ್ತಿಯನ್ನು ಕೆರಳಿಸುವುದು, ನಿಮಿರುದೌರ್ಬಲ್ಯ ಮತ್ತು ಶೀಘ್ರಸ್ಖಲನ ನಿವಾರಣೆ ಮುಂತಾದವುಗಳಿಗೆ ಎಲ್ಲಾ ವೈದ್ಯಕೀಯ ಪದ್ಧತಿಯಲ್ಲಿಯೂ ಔಷಧಗಳಿವೆಯೆಂದು ಹೇಳಿಕೊಂಡು ಬರಲಾಗುತ್ತಿದೆ. ವೈಜ್ಞಾನಿಕ ಸಂಶೋಧನೆಗಳ ಮೇಲೆ ಆಧರಿಸದೆ ಇರುವ ಈ ಎಲ್ಲಾ ಔಷಧಗಳು ಸಾಮಾನ್ಯವಾಗಿ ನಿಷ್ಪ್ರಯೋಜಕ. ಎಲ್ಲೋ ಕೆಲವರಿಗೆ ಮಾತ್ರ ಇವುಗಳು ಹುಸಿಔಷಧಿಗಳಾಗಿ (ಪ್ಲಾಸಿಬೋಅಂದರೆ ಗುಣವಾಗುವುದು ವಸ್ತುವನ್ನು ಔಷಧವೆಂದು ನಂಬಿ ತೆಗೆದುಕೊಂಡಿದ್ದಕ್ಕಾಗಿಯೇ ಹೊರತು ಅದರ ಔಷಧೀಯ ಗುಣದಿಂದಲ್ಲ) ಪ್ರಯೋಜನಕಾರಿಯಾಗಿರಬಹುದು. ಇಂದು ಪತ್ರಿಕೆಗಳಲ್ಲಿ ಭರಪೂರವಾಗಿ ಪ್ರಚಾರವಾಗುತ್ತಿರುವ ಕಾಮವರ್ಧಕಗಳು ಉಪಯುಕ್ತವಾದವು ಎನ್ನುವುದಕ್ಕೆ ವೈಜ್ಞಾನಿಕ ಆಧಾರಗಳಿಲ್ಲ. ಹಾಗಿದ್ದರೂ ಜನ ಅವುಗಳಿಗೆ ಹಣ ಸುರಿದು ಮೋಸಹೋಗುತ್ತಲೇ ಇದ್ದಾರೆ.

ಸುಮಾರು 5060ರ ದಶಕದಿಂದ ಪಾಶ್ಚಿಮಾತ್ಯ ದೇಶಗಳಲ್ಲಿ ಕಾಮಕೂಟವನ್ನು ಉದ್ರೇಕಕಾರಿಯಾಗಿಸಲು ವಿವಿಧ ತಂತ್ರಗಳನ್ನು ಕಲಿಸುವ ಚಿಕಿತ್ಸಾಪದ್ಧತಿಗಳು ಜಾರಿಗೆ ಬಂದವು. ಇವುಗಳಿಗೆ ಸೀಮಿತ ಉಪಯುಕ್ತತೆ ಇದ್ದು, ಒಂದೇ ಸಂಗಾತಿಯ ಜೊತೆಗಿನ ಲೈಂಗಿಕತೆಯನ್ನು ನಿರಂತರವಾಗಿ ಉಳಿಸಿಕೊಂಡು ಹೋಗಲು ಹೆಚ್ಚು ಸಹಕಾರಿಯಾಗುತ್ತಿರಲಿಲ್ಲ. ಹಾಗಾಗಿ ನಂತರದ ದಶಕಗಳಲ್ಲಿ ಬದ್ಧ ಸಂಗಾತಿಗಳ ನಡುವಿನ ಸಂಬಂಧವನ್ನು ಹೆಚ್ಚು ಆತ್ಮೀಯ ಮತ್ತು ವಿಶಿಷ್ಟವಾಗಿಸುವ ಮೂಲಕ ಕಾಮಕೂಟದಲ್ಲಿಯೂ ತೃಪ್ತಿ ಮತ್ತು ಪರಿಪೂರ್ಣತೆಯನ್ನು ಕಂಡುಕೊಳ್ಳುವುದರ ಬಗೆಗೆ ಸಾಕಷ್ಟು ಸಂಶೋಧನೆಗಳು ನಡೆದವು. ಕೌಟುಂಬಿಕ ವ್ಯವಸ್ಥೆಗೆ ಪ್ರಾಶಸ್ತ್ಯ ನೀಡಿ ದಂಪತಿಗಳ ತಮ್ಮ ನಡುವಿನ ಅನ್ಯೋನ್ಯತೆಯನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುವ ಇಂತಹ ಚಿಕಿತ್ಸಾ ಪದ್ಧತಿಗಳು ದೀರ್ಘಕಾಲದವರೆಗೆ ಉಪಯುಕ್ತವಾಗಿ ಉಳಿಯುತ್ತವೆ. ಡೇವಿಡ್ ಶ್ನಾರ್ಕ್ ಮತ್ತು ಎಸ್ತರ್ ಪೆರೇಲ್ ಅವರ ಚಿಂತನೆಗಳನ್ನು ಇಲ್ಲಿ ಹೆಚ್ಚಾಗಿ ಬಳಸಿದ್ದೇನೆ.

ಶಬ್ದಗಳು ನಮ್ಮ ಒಟ್ಟಾರೆ ಸಂವಹನದಲ್ಲಿ ಅರ್ಧಕ್ಕಿಂತ ಕಡಿಮೆ ಅಂಶಗಳನ್ನು ಇತರರಿಗೆ ತಲುಪಿಸುತ್ತವೆ. ಆತ್ಮೀಯ ಸಂಬಂಧಗಳಲ್ಲಂತೂ ಮಾತಿಗೆ ಅತಿಕಡಿಮೆ ಪ್ರಾಮುಖ್ಯತೆ ಇರುತ್ತದೆ. ನವಜಾತ ಶಿಶುಗಳಿಗೆ ಬರುವ ಮರಾಸ್ಮಸ್ ಕಾಯಿಲೆಗೆ ತಾಯಿಯ ಸ್ಪರ್ಶದ ಕೊರತೆಯೂ ಒಂದು ಕಾರಣ ಎಂದು ಹೇಳಲಾಗುತ್ತದೆ.

ಹೆಚ್ಚಿನ ದಂಪತಿಗಳು ಸಂಭೋಗದಲ್ಲಿ ಕೊನೆಯಾಗದ ಸ್ಪರ್ಶ ನಿರುಪಯುಕ್ತವಾದದ್ದು ಎಂದುಕೊಂಡಿರುತ್ತಾರೆ. ಹಾಗಾಗಿ ಬೇರೆಬೇರೆ ಕಾರಣಗಳಿಗಾಗಿ ದೇಹಸಂಬಂಧಗಳು ವಿರಳವಾಗುತ್ತಾ ಬಂದಂತೆ ಸ್ಪರ್ಶ ನಿಂತುಹೋಗುತ್ತದೆ. ಕಾಮಕೂಟದ ಉದ್ದೇಶದ ಹೊರತಾಗಿಯೂ ಪರಸ್ಪರ ಸ್ಪರ್ಶದಲ್ಲಿ ಆನಂದಿಸುವುದನ್ನು ಕಲಿಯಬೇಕು. ನಿಧಾನವಾಗಿ ಇಂತಹ ಸ್ಪರ್ಶ ಲೈಂಗಿಕ ಅನುಭವವನ್ನು ಸಂಭೋಗರಹಿತವಾಗಿಯೇ ಕೊಡಬಹುದು ಅಥವಾ ಹೆಚ್ಚುತ್ತಾ ಹೋಗುವ ಸ್ಪರ್ಶದ ಆಕರ್ಷಣೆ ಕೂಟದಲ್ಲಿ ಕೊನೆಯಾಗಬಹುದು! ವಯಸ್ಸು ಹೆಚ್ಚುತ್ತಾ ಲೈಂಗಿಕ ಆಸಕ್ತಿ ಮತ್ತು ಶಕ್ತಿ ಎರಡೂ ಕಡಿಮೆಯಾಗುತ್ತಾ ಬಂದಾಗ ದಂಪತಿಗಳು ಸ್ಪರ್ಶಿಸುವುದನ್ನು ಪೂರ್ಣ ನಿಲ್ಲಿಸುತ್ತಾರೆ. ಆದರೆ ವೃದ್ಧಾಪ್ಯ ಹೆಚ್ಚಿನ ಸ್ಪರ್ಶದ ಸಾಂತ್ವನವನ್ನು ಬೇಡುತ್ತದೆ. ಪತ್ನಿಯಿಂದ ಪೂರ್ಣ ತಿರಸ್ಕೃತರಾಗಿ ಹೊರಸಂಬಂಧವನ್ನು ಹುಡುಕಿಕೊಂಡಿದ್ದ 65ವರ್ಷದ ವ್ಯಕ್ತಿಯೊಬ್ಬರು ಆಪ್ತಸಲಹೆಗೆ ಬಂದಾಗ ಬೇಸರದಿಂದ ಹೇಳಿದರು, 'ನನಗೆ ಸಂಭೋಗವೇ ಬೇಕೆಂದಿರಲಿಲ್ಲ. ಆದರೆ ಹದಿನೈದು ವರ್ಷಗಳಿಂದ ಪತ್ನಿಯ ಒಂದು ಅಪ್ಪುಗೆಯೂ ಸಿಗದೆ ನಾನು ಸಂಪೂರ್ಣ ಹತಾಶನಾಗಿದ್ದೆ'.

ಬಯಕೆಯ ಮಟ್ಟ ಎಷ್ಟೇ ಇರಲಿ, ಲೈಂಗಿಕತೆ ಎಲ್ಲಾ ವಯಸ್ಕರಿಗೂ ಪ್ರಿಯವೇ. ಆದರೆ ಇದು ಕೇವಲ ಲೈಂಗಿಕ ಕ್ರಿಯೆಯಾಗಿ ಉಳಿದಾಗ ದೀರ್ಘಕಾಲ ಒಂದೇ ಸಂಗಾತಿಯೊಡನೆ ಸುಖಪಡೆಯುವುದು ಅಸಾಧ್ಯ. ಅಂದರೆ ನಮಗಿಷ್ಟವಾದ ತಿಂಡಿಯನ್ನು ತಿನ್ನುವ ಉಡುಪನ್ನು ಧರಿಸುವ ರೀತಿಯ ಕ್ರಿಯೆ ಇದಾದಾಗ ಕೂಟದಲ್ಲಿ ಎದುರಿಗಿರುವ ವ್ಯಕ್ತಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ನನಗೆ ಲೈಂಗಿಕ ಸಂಪರ್ಕದ ಹಸಿವಿದೆ, ಹಾಗಾಗಿ ನೀನು ಬೇಕು ಎನ್ನುವುದರ ಬದಲಾಗಿ ನನಗೆ ನೀನು ಇಷ್ಟವಾಗುತ್ತೀಯ, ಹಾಗಾಗಿ ನಿನ್ನೊಡನೆ ಕೂಡುವ ಬಯಕೆಯಾಗುತ್ತದೆ ಎನ್ನುವುದು ದಂಪತಿಗಳ ಮನಃಸ್ಥಿತಿಯಾಗಬೇಕು. ಲೈಂಗಿಕಕ್ರಿಯೆಯಿಂದ ಪಡೆಯುವ ಆನಂದ ವಸ್ತುವಿನಿಂದಲ್ಲ ವ್ಯಕ್ತಿಯಿಂದ ಬರುತ್ತಿರುತ್ತಿದೆ. ಅಂತಹ ವ್ಯಕ್ತಿಯೇ ಆಕರ್ಷಕ ಎನ್ನಿಸಿದಿದ್ದರೆ ಕ್ರಿಯೆ ಸಹಜವಾಗಿ ಆಕರ್ಷಣೆಯನ್ನು ಕಳೆದುಕೊಳ್ಳುತ್ತದೆ.

## ಆಲ್ ಇನ್ ಒನ್!

ಹಿಂದೆಲ್ಲಾ ಮದುವೆಗಳು ಕುಟುಂಬಗಳ ಒಪ್ಪಿಗೆಯಿಂದ ನಡೆಯಿತ್ತಿದ್ದವು. ಹಾಗಾಗಿ ಅದನ್ನು ಉಳಿಸಿಕೊಳ್ಳಲು ಎರಡೂ ಕುಟುಂಬಗಳು ಪ್ರಯತ್ನಿಸುತ್ತಿದ್ದವು. ಇವತ್ತಿನ ದಂಪತಿಗಳು ತಾವೇ ಆಯ್ಕೆ ಮಾಡಿಕೊಂಡ ಸಂಗಾತಿಯೊಡನೆ ಬಾಳುವಾಗ ಪರಸ್ಪರ ಹಲವಾರು ಅಗತ್ಯಗಳನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಒಂದೇ ಸಂಗಾತಿ ಮಕ್ಕಳಿಗೆ ಪೋಷಕರಾಗಿ, ಮನೆಗೆಲಸದ ಸಹಾಯಕರಾಗಿ, ಸ್ನೇಹಿತ/ಸ್ನೇಹಿತೆಯಾಗಿ, ದುಡಿಯುವ ಕೈಗಳಾಗಿ, ಪ್ರಿಯಕರ/ ಪ್ರಿಯತಮೆಯಾಗಿ, ಆಸ್ತಿಯ ಹಕ್ಕುದಾರರಾಗಿ ಹೀಗೆ ಹಲವಾರು ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಹಿಂದೆಲ್ಲಾ ಕುಟುಂಬದ ಹಲವಾರು ಜನ ನಿರ್ವಹಿಸಬೇಕಾದ ಭಿನ್ನಭಿನ್ನ ಪಾತ್ರಗಳನ್ನು ಇವತ್ತಿನ ದಂಪತಿಗಳಲ್ಲಿ ಒಬ್ಬೊಬ್ಬರೇ ನಿರ್ವಹಿಸಬೇಕಾಗುತ್ತದೆ ಎಂದು ಎಸ್ತರ್ ಪೆರೇಲ್ ಹೇಳುತ್ತಾರೆ. ಹೀಗೆ ಪಾತ್ರಾಂತರ ಮಾಡಿಕೊಳ್ಳುವುದಕ್ಕೆ ಬೇರೆಯದೇ ಆದ ಅರಿವು, ಪ್ರಯತ್ನ ಎಲ್ಲವೂ ಬೇಕಾಗುತ್ತದೆ. ಮುಕ್ತಕಾಮವನ್ನು ಅನುಭವಿಸಲು ಪತಿ–ಪತ್ನಿಯರು ಪ್ರಿಯಕರ/ ಪ್ರಿಯತಮೆಯ ಪಾತ್ರವನ್ನು ನಿರ್ವಹಿಸಬೇಕಾಗುತ್ತಾದೆ. ಆದರೆ ಮಲಗುವ ಕೋಣೆಯಲ್ಲಿ ಅವರು ಪೋಷಕರ ಅಥವಾ ದುಡಿಯುವವರ ಪಾತ್ರದಲ್ಲಿದ್ದಾಗ ಕಾಮ ಕೆರಳುವುದಿಲ್ಲ. ಮದುವೆಯ ಆರಂಭದಲ್ಲಿ ಅಥವಾ ಹೊರಸಂಬಂಧಗಳಲ್ಲಿ ಬೇರೆ ಯಾವುದೇ ಪಾತ್ರವನ್ನು ನಿರ್ವಹಿಸುವ ಅನಿವಾರ್ಯತೆ

**ಮುಕ್ತಕಾಮವನ್ನು ಅನುಭವಿಸಲು ಪತಿ–ಪತ್ನಿಯರು ಪ್ರಿಯಕರ– ಪ್ರಿಯತಮೆಯ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.**

